I/681687/2024

ಕರ್ನಾಟಕ ಸರ್ಕಾರ

GOVERNMENT OF KARNATAKA

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು -560 003
AranyaBhavan, 18th Cross
Malleshwaram, Bengaluru-560 003
Telephone : 080 2334 6472
Email : apccffc@gmail.com

E-Office File No. KFD/HOFF/A5-1(MNG)/11/2018-FC **E-62504**

ದಿನಾಂಕ -09-2024

ರವರಿಗೆ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಬಹು ಮಹಡಿಕಟ್ಟಡ, ಬೆಂಗಳೂರು.

ಮಾನ್ಯರೇ,

**ವಿಷಯ:** Diversion of 22.2887 hectares (Revised from 23.863 hectares) of forest land in Swamymalai Block, Sandur South Range, Sandur taluk, Ballari District for pipeline Conveyor belt at Subbarayanahalli Iron Ore Mine ML No.2629 in favour of M/s. Karnataka State Mineral Corporation Limited (Erstwhile Mysore Minerals Ltd) (Proposal No. FP/KA/MIN/48923/2020 [FORM-A]) – Reg.,

**ಉಲ್ಲೇಖ:**

1. ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ(ಅರಣ್ಯ-ಸಿ ಮತ್ತು ಸಮನ್ವಯ)ರವರ ಪತ್ರ ಸಂಖ್ಯೆ:ಎಫ್‌ಇಇ 11 ಎಫ್‌ಎಲ್‌ಎಲ್ 2024 (ಇ), ದಿನಾಂಕ:30-01-2024 ಮತ್ತು 14-05-2024
2. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ:08-02-2024 ಮತ್ತು 22-05-2024
3. ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವಿಭಾಗ, ಬಳ್ಳಾರಿ ರವರ ಪತ್ರ ಸಂಖ್ಯೆ:ಎಂ1/ಎಂಎನ್‌ಜಿ/ಕೆಎಸ್‌ಎಂಸಿಎಲ್(ಎಂಎಂಎಲ್ )/ಗಗು.2605/2021-22, ದಿನಾಂಕ:26-08-2024
4. ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವೃತ್ತ, ಬಳ್ಳಾರಿ ರವರ ಪತ್ರ ಸಂಖ್ಯೆ:ಎಂ1/ಎಂಎನ್‌ಜಿ/ಎಂಎಂಎಲ್/ಸಿಆರ್-14/2021-22, ದಿನಾಂಕ:10-09-2024

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರಲ್ಲಿ ರಾಜ್ಯ ಸರ್ಕಾರವು ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಕೆಲವು ಅಂಶಗಳನ್ನು ಪರಿಶೀಲಿಸಿ ವಿವರವಾದ ವರದಿ/ಮಾಹಿತಿಯನ್ನು ಶೀಘ್ರವಾಗಿ

I/681687/2024 ಸಲ್ಲಿಸುವಂತೆ ನಿರ್ದೇಶಿಸಿರುತ್ತಾರೆ. ಅದರಂತೆ ಉಲ್ಲೇಖ(2)ರಲ್ಲಿ ಈ ಕಛೇರಿಯು ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ರವರಿಗೆ ವಿಳಾಸಿಸಿ, ರಾಜ್ಯ ಸರ್ಕಾರವು ಕೋರಿರುವ ಮಾಹಿತಿ/ವರದಿಯನ್ನು ಕೂಡಲೇ ಈ ಕಛೇರಿಗೆ ಸಲ್ಲಿಸಬೇಕೆಂದು ತಿಳಿಸಲಾಗಿರುತ್ತದೆ.

ಅದರಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವಿಭಾಗ, ಬಳ್ಳಾರಿ ರವರು ಉಲ್ಲೇಖ(3)ರಲ್ಲಿ ರಾಜ್ಯ ಸರ್ಕಾರವು ಕೇಳಿರುವ ಅಂಶಗಳಿಗೆ ಈ ಕೆಳಗಿನಂತೆ ಅಂಶವಾರು ಮಾಹಿತಿಯನ್ನು ಸಲ್ಲಿಸಿರುತ್ತಾರೆ.

| ಕ್ರಂ ಸಂ | ಕೋರಿದ ಅಂಶಗಳು | ಸಲ್ಲಿಸಲಾದ ಮಾಹಿತಿ |
|---|---|---|
| 1 | ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಒದಗಿಸುವ ಜಮೀನಿನ RF/PF ಆಗುವುದು ಬಾಕಿ ಇರುತ್ತದೆ. | ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಒದಗಿಸಿರುವ ಪ್ರದೇಶ ಅಂದರೆ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲೂಕಿನ ಕುಡುತಿನಿ ಸ.ನಂ.1251 ರ ಪ್ರದೇಶವು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ : ಅಪಜೀ 79 ಎಫ್ಎಎಫ್ 2024 ದಿನಾಂಕ: 19.07.2024 ರಲ್ಲಿ ಕರ್ನಾಟಕ ಅರಣ್ಯ ಕಾಯ್ದೆ, 1963 ರ ಸೆಕ್ಷನ್-33 ರಡಿಯಲ್ಲಿ "ರಕ್ಷಿತಾ ಅರಣ್ಯ" ವೆಂದು ಘೋಷಣೆಯಾಗಿರುತ್ತದೆ. (ಪ್ರತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ) |
| 2 | RFOR ಪ್ರಮಾಣ ಪತ್ರ ಸಲ್ಲಿಸುವುದು. | ಈ ಕುರಿತು ಮೆ\|\|. ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು ಇವರು RFOR ಪ್ರಮಾಣ ಪತ್ರವನ್ನು ಪಡೆಯಲು ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಮನವಿಯನ್ನು ದಿನಾಂಕ: 18.03.2022 ರಂದು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. (ಪ್ರತಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ). |
| 3 | NPV ಮೊತ್ತವನ್ನು ಪಾವತಿಸುವುದು ಬಾಕಿ ಇರುತ್ತದೆ. | ಈ ಕುರಿತು ಮೆ\|\|. ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು ಇವರು ಸದರಿ ಕನ್ವೆಯರ್ ಬೆಲ್ಟ್ 22.2887 ಹೆಕ್ಟೇರ್ ಪ್ರದೇಶದ ಪ್ರಸ್ತಾವನೆಯು ಸ್ಟೇಜ್-1 ಅನುಮೋದನೆಯಾದ ಮೇಲೆ ಅರಣ್ಯ ಇಲಾಖೆಯಿಂದ ಡಿಮ್ಯಾಂಡ್ ನೋಟೀಸ್ ಪಡೆದ ನಂತರ NPV ಮೊತ್ತವನ್ನು ಪಾವತಿಸುವುದಾಗಿ ತಿಳಿಸಿರುತಾರೆ. ಪ್ರತಿಯನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ). |

I/681687/2024

ಮುಂದುವರೆದು, ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ರವರು ಉಲ್ಲೇಖ(4)ರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವಿಭಾಗ, ಬಳ್ಳಾರಿ ರವರು ಸಲ್ಲಿಸಿರುವ ವರದಿಯನ್ನು ತಮ್ಮ ಪತ್ರದೊಂದಿಗೆ ಲಗತ್ತಿಸಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಅದರಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವಿಭಾಗ, ಬಳ್ಳಾರಿ ಮತ್ತು ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ರವರು ನೀಡಿರುವ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

**Signed by Brijesh Kumar**
**Date: 30-09-2024 17:43:12**
**Reason: Approved**

(ಬ್ರಿಜೇಶ್ ಕುಮಾರ್, ಐ.ಎಫ್.ಎಸ್)

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

(ಅರಣ್ಯ ಸಂರಕ್ಷಣೆ) ನೋಡಲ್ ಅಧಿಕಾರಿ ಮತ್ತು (ಅ.ಸಂ.ಕಾ)

**ಪ್ರತಿಯನ್ನು**

1. ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವಿಭಾಗ ಮಾಹಿತಿ ಬಳ್ಳಾರಿ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ವ್ಯವಸ್ಥಾಪಕ ನಿರ್ದೇಶಕರು, ಮೆ|| ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತ, ಟಿಟಿಎಂಸಿ, ಎ-ಬ್ಲಾಕ್ 5ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027 ಇವರಿಗೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ